ನಿಯಮದಂತೆ ಶೇಕಡ 10ರಷ್ಟು ಸೇರಿಸಲಾಗಿದೆ. ಈ ಕಾರಣದಿಂದ ಮನೆಗಳ ಅಂತಿಮ ಬೆಲೆಯಲ್ಲಿ ಶೇಕಡ 11.51 ರಷ್ಟು ಹೆಚ್ಚಳಕ್ಕೆ ಕಾರಣವಾಗಿದೆ.

ಊ) ಬಂದಿದೆ.

ವಿಷಯ:- ಬೆಂಗಳೂರಿನಲ್ಲಿರುವ ಆಟೋಗಳ ಸಂಖ್ಯೆ

ಚುಕ್ಕೆ ರಹಿತ ಗುರುತಿನ ಪ್ರಶ್ನೆ ಸಂಖ್ಯೆ 584 (685)

ಶ್ರೀ ಎಸ್.ಸುರೇಶ್ ಕುಮಾರ್ (ರಾಜಾಜಿನಗರ):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿರುವ ಆಟೋರಿಕ್ಷಾಗಳ ಸಂಖ್ಯೆ ಎಷ್ಟು?

ಆ) ನಗರದ ಬಸ್ ಸ್ಟಾಂಡ್, ರೈಲ್ವೆ ನಿಲ್ದಾಣ ಮುಂತಾದ ಸ್ಥಳಗಳಲ್ಲಿ ಆಟೋರಿಕ್ಷಾ ಚಾಲಕರ ವರ್ತನೆಯಿಂದ ಪ್ರಯಾಣಿಕರಿಗೆ ಉಂಟಾಗುತ್ತಿರುವ ಸಮಸ್ಯೆಗಳು ಸರ್ಕಾರದ ಗಮನಕ್ಕೆ ಬಂದಿದೆಯೆ;

ಇ) ಹಾಗಿದ್ದಲ್ಲಿ ಈ ಸಮಸ್ಯೆ ಪರಿಹರಿಸಲು ಕೈಗೊಳ್ಳಲಾಗುವ ಕ್ರಮಗಳೇನು?

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು):-

ಅ) ಬೆಂಗಳೂರು ನಗರದಲ್ಲಿ 31-5-1996ರ ಅಂತ್ಯದವರೆಗೆ 40,389 ಆಟೋರಿಕ್ಷಾಗಳಿವೆ.

ಆ) ಹೌದು.

ಇ) 1995-96ನೇ ಸಾಲಿನಲ್ಲಿ ಆಟೋರಿಕ್ಷಾ ಚಾಲಕರು ವಿವಿಧ ರೀತಿಯ ದುರ್ವರ್ತನೆಯಿಂದ ಅಂದರೆ ಹೆಚ್ಚಿನದರ ಕೇಳುವುದು, ಕರೆದ ಕಡೆ ಬಾರದೆ ಇರುವುವಂತಹ ಪ್ರಕರಣಗಳಲ್ಲಿ 125 ಕೇಸುಗಳನ್ನು ದಾಖಲು ಮಾಡಲಾಗಿದೆ. ಅಂತಹ ಚಾಲಕರುಗಳಿಗೆ ನೋಟೀಸನ್ನು ನೀಡಿ ದಂಡ ವಸೂಲಿ ಮಾಡಲಾಗಿದೆ.

ವಿಷಯ:- ಬೆಳೆ ವಿಮೆಯ ಯೋಜನೆಯಲ್ಲಿ ರೈತರಿಂದ ವಸೂಲು ಮಾಡಿದ ಹಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 590 (1183)

ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ):- ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳೆ ವಿಮಾ ಯೋಜನೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ರೈತರಿಂದ ವಸೂಲಿ ಮಾಡಿದ ಪ್ರೀಮಿಯಂ ಹಣವೆಷ್ಟು? ರೈತರಿಗೆ ಈ ವಿಮಾ ಯೋಜನೆಯಿಂದ ಎಷ್ಟು ಮೊತ್ತದ ಸೌಲಭ್ಯ ದೊರಕಿದೆ? (ಜಿಲ್ಲಾವಾರು ವಿವರ ನೀಡುವುದು)